ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ನಂ. 1 ಕಟ್ಟಡಗಳ ಉಪ ವಿಭಾಗ, ವಿ.ವಿ ಕೇಂದ್ರ,
ಬೆಂಗಳೂರು ರವರ ಕಾರ್ಯಾಲಯ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ದೂರವಾಣಿ 22863305
e-mail
:aee1vvtower@gmail.com

ಸಂ: ಸಕಾಇಂ/ನಂ.1ಕ.ಉ.ವಿ/ಕ.ಇಂ-4/2025-26/ 990 ದಿನಾಂಕ: 23/12/2025

To,
The Principal,
Velammal Vidyalaya,
No. 78/1, Singanayakanahalli,
Hesaraghatta main road,
Yelahanka,
Bangalore - 560064.

ಮಾನ್ಯರೇ,

ವಿಷಯ: Velammal Vidyalaya, ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:1) Velammal Vidyalaya, ರವರ ಪತ್ರ ದಿನಾಂಕ: 17-12-2025
2) ಸರ್ಕಾರದ ಆದೇಶ ಸಂಖ್ಯೆ: ಲೋ.ಇ/59/ಬಿ.ಇ.ಡಿ/2019/ದಿನಾಂಕ: 06-05-2022.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Velammal Vidyalaya, No. 78/1, Singanayakanahalli, Hesaraghatta main road, Yelahanka, Bangalore - 560064 ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1)ರ ತಮ್ಮ ಪತ್ರದಲ್ಲಿ ಕೋರಲಾಗಿರುತ್ತದೆ. ಹಾಗೂ ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಅದರಂತೆ, ಶಾಲಾ ಕಟ್ಟಡವನ್ನು ದಿನಾಂಕ: 20-12-2025 ರಂದು Velammal Vidyalaya, ಮುಖ್ಯಸ್ಥರ ಉಪಸ್ಥಿತಿಯಲ್ಲಿ ಪರಿವೀಕ್ಷಿಸಲಾಗಿರುತ್ತದೆ. ಹಾಗೂ ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ನಗರ ಪ್ರದೇಶದಲ್ಲಿನ ಶಾಲೆಯ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ರೂ. 5,000/- ಗಳ ಮೊತ್ತವನ್ನು The Assistant Executive Engineer, No. 1 Buildings Sub-division, V.V. Centre, Bangalore ರವರ ಹೆಸರಿನಲ್ಲಿ ಖಜಾನೆ-2 ಮುಖಾಂತರ ಪಾವತಿಸಿ ಚಲನ್ ಸಂಖ್ಯೆ: CR1225021600277840 ನ್ನು ಈ ಕಛೇರಿಗೆ ಸಲ್ಲಿಸಿರುತ್ತೀರಿ.

- ಸದರಿ ಶಾಲಾ ಕಟ್ಟಡವನ್ನು Velammal Vidyalaya, No. 78/1, Singanayakanahalli, Hesaraghatta main road, Yelahanka, Bangalore - 560064 ರಲ್ಲಿ ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಸದರಿ ಕಟ್ಟಡ ಸಂಕೀರ್ಣವು ನೆಲಮಹಡಿ ಮತ್ತು ಮೂರು ಮೇಲ್ಮಹಡಿಗಳನ್ನು ಹೊಂದಿರುತ್ತದೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ 2024ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ಕಟ್ಟಡದ ಆರ್.ಸಿ.ಸಿ. ಕಂಬ, ತೊಲೆ ಹಾಗೂ ಛಾವಣಿಯಲ್ಲಿ ಯಾವುದೇ ಬಿರುಕುಗಳು ಕಂಡು ಬಂದಿರುವುದಿಲ್ಲ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಹಾಗೂ ಕಟ್ಟಡವು Structural Sound Condition ಇರುವುದಾಗಿ ಪರೀಕ್ಷೆ ವರದಿಗಳು ಕಂಡು ಬಂದಿರುವುದರಿಂದ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಅಗ್ನಿಶಾಮಕ ಇಲಾಖೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ / ಪ್ರಮಾಣ ಪತ್ರವನ್ನು ನಿಯಮಾವಳಿಗಳ ಅನ್ವಯ ನಿಗದಿತ ಸಮಯಗಳಲ್ಲಿ ಪಡೆಯತಕ್ಕದ್ದು.
2. ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ನಿರ್ವಹಣೆ ಮಾಡತಕ್ಕದ್ದು.
3. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ಆದ್ಯತೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.
4. ಕಟ್ಟಡದ ಸದೃಡತೆಗೆ ಧಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದ್ದಲ್ಲ. ಅನುಮತಿ ಪಡೆಯದೇ ಕೈಗೊಂಡಲ್ಲಿ ಪ್ರಮಾಣ ಪತ್ರವು ಆ ಕೂಡಲೇ ರದ್ದಾಗುತ್ತದೆ.
5. ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಚತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲೆ ತಿಳಿಸಲಾಗಿರುವ ಷರತ್ತುಗಳಿಗೊಳಪಟ್ಟು Velammal Vidyalaya, No. 78/1, Singanayakanahalli, Hesaraghatta main road, Yelahanka, Bangalore – 560064 ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು 2025–26ನೇ ಸಾಲಿನಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ನಂ. 1, ಕಟ್ಟಡಗಳ ಉಪ-ವಿಭಾಗ, ವಿ.ವಿ. ಕೇಂದ್ರ
ಬೆಂಗಳೂರು-560 001